# ಜೋರ್ಬಿಂಗ್ ಎಂಬ ಗುಳ್ಳೆಯಾಟ



ಚಿತ್ರದಲ್ಲಿರುವ ಬೃಹತ್ ಬಲೂನುಗಳನ್ನು ನೋಡಿದರೆ ಇವನ್ನು ಯಾವುದಕ್ಕೆ ಉಪಯೋಗಿಸುತ್ತಾರೆ ಎಂಬ ಪ್ರಶ್ನೆ ಏಳುವುದು ಸಹಜ. ಗಟ್ಟಿ ಪ್ಲಾಸ್ಟಿಕ್ ಮತ್ತು ಹಗ್ಗಗಳಿಂದ ತಯಾರಿಸಲ್ಪಟ್ಟ ಈ ಬಲೂನುಗಳ ಒಳಗೆ ಇಬ್ಬರು ಕುಳಿತುಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಹುಲ್ಲುಹಾಸಿನ ಇಳಿಜಾರು ಇರುವ ಕಡೆ ಇದನ್ನು ಎತ್ತರದ ಸ್ಥಳದಿಂದ ಉರುಳಿಬಿಡುತ್ತಾರೆ. ಒಳಗೆ ಕುಳಿತವರು ಪಲ್ಟಿ ಹೊಡೆಯುತ್ತಾ ಉರುಳಿದರೆ ರೋಚಕ ಅನುಭವವನ್ನು ಪಡೆಯುತ್ತಾರೆ. ಈ ಆಟವನ್ನು ಜೋರ್ಬಿಂಗ್ ಎಂದು ಕರೆಯುತ್ತಾರೆ.


ಚಿತ್ರದಲ್ಲಿರುವುದು ಹಿಮಾಚಲ ಪ್ರದೇಶದ ಡಾಲ್‌ಹೌಸಿಯದು. ಹಿಮಾಚಲದ ಅನೇಕ ಪ್ರವಾಸಿ ಸ್ಥಳಗಳಲ್ಲಿ ಇದನ್ನು ಕಾಣಬಹುದು. ಇತ್ತೀಚೆಗೆ ನಮ್ಮಲ್ಲಿಯೂ ಕೆಲವೊಂದು ಹೋಮ್‌ಸ್ಟೇ ಮತ್ತು ರೆಸಾರ್ಟ್‌ಗಳಲ್ಲಿ ಇಂತಹ ಹೊಸ ರೀತಿಯ ಆಟಗಳನ್ನು ಪ್ರಾರಂಭಿಸಿದ್ದಾರೆ.

**-ಕೆ.ಎಸ್. ನೀತಾ, ಹಾಸನ**

# ಕೂಪಾರಾಮ ವಾಟಿಕೆ

ಬಳ್ಳಾರಿ ಜಿಲ್ಲೆಯ ಹೊಸಪೇಟೆಯಿಂದ ಹಂಪೆಯ ಮಾರ್ಗವಾಗಿ ಸಾಗುವಾಗ ಬರುವ ಮಲಪನಗುಡಿಯಲ್ಲಿ ಹೆರಿಟೇಜ್ ವಿಲೇಜ್ ರೆಸಾರ್ಟ್ ಇದೆ. ಸ್ವಲ್ಪ ಮುಂದೆ ಹೋದರೆ ರಸ್ತೆಗಳನ್ನು ಮಂಟಪವೊಂದು ಬೇರ್ಪಡಿಸಿದೆ. ತುಸು ಮುಂದೆ ಸಾಗಿ ನೋಡಿದರೆ ಸಿಗುವುದೇ 'ಕೂಪಾರಾಮ ವಾಟಿಕೆ'. ಸಂಸ್ಕೃತದಲ್ಲಿ ಬಾವಿಗೆ ಕೂಪ ಎನ್ನುತ್ತಾರೆ. ರಾಮನ ಹೆಸರು ಇದಕ್ಕೆ ಅಂಟಿರುವುದಾದರೂ ಏಕೆಂದು ಗೊತ್ತಿಲ್ಲ. ರಾಮಾಯಣದ ಕಿಷ್ಕಿಂಧೆ ಇಲ್ಲಿಯೇ ಇತ್ತೆಂದು ಹೇಳಲಾಗುವ ಹಲವು ನಿದರ್ಶನಗಳು ಸಿಗುತ್ತವೆ. ಕಮಲಾಪುರದ ರಾಣಿಸ್ನಾನ ಗೃಹದಲ್ಲಿರುವಂತೆ ವೃತ್ತಾಕಾರದ ಈ ಬಾವಿಯ ಸುತ್ತ ಮಂಟಪಗಳಿವೆ. ಬಾವಿಗೆ ಇಳಿಯಲು ಪಾವಟಿಗೆಗಳು ಇವೆ. ಬಾವಿಯೊಳಗೆ ಇಣುಕಿದರೆ ಈಗಲೂ ನೀರನ್ನು ನೋಡಬಹುದು. ಇದೊಂದು ಸಂರಕ್ಷಿತ ಸ್ಮಾರಕವಾಗಿದ್ದು, ಐತಿಹಾಸಿಕ ಮಹತ್ವ ಇರುವ ಇದನ್ನು ರಕ್ಷಿಸುವಲ್ಲಿ ಉತ್ತಮ ಕ್ರಮ ಕೈಗೊಳ್ಳಲಾಗಿದೆ. ಬಾವಿಯ ಸುತ್ತಲೂ ವಿಶಾಲವಾದ ಸುಂದರ ಕೈತೋಟ ನಿರ್ಮಿಸಿದ್ದಾರೆ. ಬಾವಿಯೊಳಗೆ ಇಳಿಯದಂತೆ ನಿಷೇಧಿಸಲಾಗಿದೆ. ವಿಜಯನಗರ ಸಾಮ್ರಾಜ್ಯದ ಪಳೆಯುಳಿಕೆಗಳು ಹುಡುಕಿದಷ್ಟೂ ಸಿಗುತ್ತಲೇ ಇರುತ್ತವೆ. ಈ ಸುಂದರ ಬಾವಿಯನ್ನು ಹಂಪೆಗೆ ಹೋಗುವಾಗ ನೀವೊಮ್ಮೆ ನೋಡಲು ಮರೆಯದಿರಿ.

**ಚಿತ್ರ- ಬರಹ: ರಾಮಪ್ರಸಾದ ಬಿ, ಹೊಸಪೇಟೆ**



# ಇಲ್ಲಿವೆ ಗುಬ್ಬಚ್ಚಿಗಳು!

ಇತ್ತೀಚೆಗೆ ನಮ್ಮ ಅಣ್ಣ ರಂಗಸ್ವಾಮಿಯವರ ಚಿಕ್ಕಮಗಳೂರಿನ ಮನೆಗೆ ಹೋಗಿದ್ದೆವು. ಬೆಳಗಿನ ತಿಂಡಿ ತಿಂದು ಕೂತಿದ್ದೆವು. 'ರಶ್ಮಿ, ಸ್ವಲ್ಪ ನುಚ್ಚು ತಂದು ಹಾಕು' ಎಂದು ಮಗಳಿಗೆ ಹೇಳಿದರು ನಮ್ಮ ಅಣ್ಣ. ಒಳಗಿನಿಂದ



ಮುಷ್ಟಿಯಲ್ಲಿ ಅಕ್ಕಿ ನುಚ್ಚನ್ನು ತಂದ ರಶ್ಮಿ ಕಿಟಕಿಯ ಹೊರಭಾಗದ ಕಟ್ಟೆಯ ಮೇಲೆ ಹಾಕಿದಳು. ಎದುರಿನ ಖಾಲಿ ನಿವೇಶನದ ಲಂಟಾನ ಪೊದೆಗಳಲ್ಲಿ ಕುಳಿತಿದ್ದ ಗುಬ್ಬಚ್ಚಿಗಳು ಒಂದೊಂದಾಗಿ ಬಂದು ಕಾಂಪೌಂಡ್ ಒಳಗಿನ ಗಿಡಗಳ ಮೇಲೆ ಕುಳಿತವು. ನಂತರ ಒಂದೊಂದಾಗಿ ಕಿಟಕಿಯ ಬಳಿ ಬಂದು ಕುಳಿತು ಅಕ್ಕಿಯ ನುಚ್ಚನ್ನು ಮೆಲ್ಲತೊಡಗಿದವು. ಅವುಗಳ ಮೇಲಾಟ, ಚಿನ್ನಾಟ ನೋಡಿ ನಮಗೆ ಬಹಳ ಸಂತೋಷವಾಯಿತು. ಪ್ರತಿನಿತ್ಯ ಬೆಳಿಗ್ಗೆ ಹನ್ನೊಂದು ಗಂಟೆ ಮತ್ತು ಮಧ್ಯಾಹ್ನ ನಾಲ್ಕು ಗಂಟೆಯ ಹೊತ್ತಿಗೆ ಗುಬ್ಬಚ್ಚಿಗಳು ಅಲ್ಲಿಗೆ ಬರುವ ರೂಢಿ ಮಾಡಿಕೊಂಡಿವೆಯಂತೆ!

ಒಂದೆರಡಲ್ಲ ಸುಮಾರು ಐವತ್ತಕ್ಕೂ ಹೆಚ್ಚು ಗುಬ್ಬಚ್ಚಿಗಳು ಅಲ್ಲಿದ್ದವೆಂದು ಆನಂತರವೇ ನಮಗೆ ತಿಳಿದಿದ್ದು. ನಮ್ಮ ಜತೆ ರಜಕ್ಕೆಂದು ಬಂದಿದ್ದ ನನ್ನ ನಾದಿನಿಯ ಮಗ ಚಿನ್ಮಯನಿಗಂತೂ ಸಂಭ್ರಮವೋ ಸಂಭ್ರಮ. 'ಮಂಗ್ಳೂರಲ್ಲಿ ಒಂದೇ ಒಂದು ಗುಬ್ಬಚ್ಚಿಯೂ ಕಾಣಲ್ಲ. ಗುಬ್ಬಚ್ಚಿಗಳು ಎಲ್ಲೂ ಇಲ್ಲ ಅಂತಾರೆ. ಇಲ್ಲಿ ಇಷ್ಟು ಬರುತ್ವಲ್ಲ' ಎನ್ನುತ್ತಾ ಆಶ್ಚರ್ಯಪಟ್ಟ. ಮರೆಯಲ್ಲಿ ಕುಳಿತು ಅವುಗಳ ಫೋಟೋ ತೆಗೆಯುವುದೇ ಅವನ ಕೆಲಸವಾಯಿತು. ಪರಿಸರದ ಅಳಿವು ಉಳಿವು ನಮ್ಮ ಕೈಯಲ್ಲೇ ಇದೆಯಲ್ಲವೇ ಅನ್ನಿಸಿತು.

**-ಬಿ.ಎಸ್. ರಾಜಲಕ್ಷ್ಮಿ, ಹಾಸನ**